ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ಗಾಳಿಪಟದ ಸೂತ್ರಕ್ಕೂ, ಮಡದಿಯ ಮಂಗಳಸೂತ್ರಕ್ಕೂ ಇರುವ ವ್ಯತ್ಯಾಸವೇನು?*



ಒಂದು ಹಾರಾಡಲು ಪೂರಕ; ಇನ್ನೊಂದು ಹಾರಾಟವನ್ನು ಬಂದ್ ಮಾಡಲು ಪೂರಕ

ಡಿ.ಎಸ್. ಪಂಕಜಸುಬ್ರಹ್ಮಣ್ಯ, ಬೆಂಗಳೂರು
*ವಯಸ್ಸಾದಂತೆ ಕಿವಿ, ಮೂಗು ಬೆಳೆಯುವಂತೆ ಕಣ್ಣು ಮತ್ತು ಹಲ್ಲು ಏಕೆ ಬೆಳೆಯುವುದಿಲ್ಲ?*
ವಯಸ್ಸಾದಂತೆ ಅನ್ಯರ ಖಾಸಗಿ ವಿಷಯಗಳತ್ತ ಕಿವಿ ಚಾಚುವುದರಿಂದ, ಮೂಗು ತೂರಿಸುವುದರಿಂದ ಬೆಳೆಯುತ್ತವೆ. ಕಣ್ಣು ಕಿಸಿಯುವುದರಿಂದ, ಹಲ್ಲು ಮಸೆಯುವುದರಿಂದ ಬೆಳೆಯುವುದಿಲ್ಲ.

ಪಿ.ಜೆ. ರಾಘವೇಂದ್ರ, ಮೈಸೂರು
*ಮತ ನೀಡಲು, ಚುನಾವಣೆಯಲ್ಲಿ ಸ್ಪರ್ಧಿಸಲು, ಲಗ್ನವಾಗಲು ಕನಿಷ್ಠ ವಯೋಮಿತಿ ಇದೆ; ಗರಿಷ್ಠ ವಯೋಮಿತಿ ಏಕಿಲ್ಲ?*
ಪಂಕ್ಚುಯೇಶನ್ ಪ್ರಾಬ್ಲಮ್; ನಮಗೆ ಈ ವಿಷಯಗಳಲ್ಲಿ ಕಾಮ ಮಾತ್ರ ಗೊತ್ತು, ಫುಲ್‌ಸ್ಟಾಪ್ ಗೊತ್ತಿಲ್ಲ.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
*ಮಾನವನ ಬೆವರನ್ನು ಸದ್ಬಳಕೆ ಮಾಡಿಕೊಳ್ಳುವುದು ಹೇಗೆ?*



ಖುಷಿಗೆ ಜಿಮ್‌ನಲ್ಲಿ ಬೆವರು ಸುರಿಸುವ ಬದಲು ಕೃಷಿಗೆ ಜಮೀನಲ್ಲಿ ಸುರಿಸುವುದರ ಮೂಲಕ.

ಬಿ.ಎ. ಅಜರುದ್ದೀನ್, ಬಾಚಹಳ್ಳಿ
*ಶೈವರಿಗೆ ಶಿವ ದೊಡ್ಡೋನು; ವೈಷ್ಣವರಿಗೆ ಹರಿ ಸರ್ವೋತ್ತಮನು. ನಿಮಗೆ?*
ಕಾಣದ ಶಕ್ತಿಗಿಂತ, ಕಾಣುವ ಪ್ರತಿ ಮಾನವೀಯ ವ್ಯಕ್ತಿಯೂ ದೊಡ್ಡವನು.

ಹೆಚ್. ಗೋಪಿನಾಥ್, ಬಳ್ಳಾರಿ
*ಆಕಾಶ, ನಕ್ಷತ್ರಗಳು ಇರುವ ಉದ್ದೇಶವೇನು?*
ಹೃದಯ ವೈಶಾಲ್ಯ ಇಂತಿರಲಿ ಎನ್ನಲು ಆಕಾಶ; ಸ್ವಯಂಪ್ರಭೆ ಹೊಂದು ಎನ್ನಲು ನಕ್ಷತ್ರ.

ಎಂ. ಕೃಷ್ಣಾನಂದ ಶೆಟ್ಟಿ, ಮಂಗಳೂರು
*ದೇವರ ದರ್ಶನದ ಸಮಯದಲ್ಲಿ ಭಕ್ತರ ಕಾಲ್ತುಳಿತಕ್ಕೆ ಸಿಕ್ಕಿ ಸತ್ತರೆ ಮೋಕ್ಷ ಸಿಕ್ಕೀತೆ ಭಗವಂತಾ...?*
ಕಾಶಿ ಎಕ್ಸ್‌ಪ್ರೆಸ್‌ಗೆ ತಲೆ ಕೊಟ್ಟರೆ ಮೋಕ್ಷ ಸಿಕ್ಕೀತೇ? ಮೋಕ್ಷಕ್ಕೆ ಬೇಕಾದ್ದು ಮರಣ ರೀತಿಯಲ್ಲ, ಜೀವನನೀತಿ.

ಗೌರಿ ಶೇಷಾದ್ರಿ, ಉತ್ತನಹಳ್ಳಿ
*ತಾನು ಮಾಡುತ್ತಿರುವುದು ತಪ್ಪು ಎಂದು ಗೊತ್ತಿದ್ದೂ ಮನುಜ ತಪ್ಪು ಮಾಡುವುದು ಏಕೆ?*
ಇಳಿಜಾರಿಗೆ ಇರುವ ಸೆಳೆತ ಸರಿದಾರಿಗೆ ಇರುವುದಿಲ್ಲ.

ನೇ.ಗೋ.ಭ., ಕುಕ್ಕೆ ಸುಬ್ರಹ್ಮಣ್ಯ
*ನಿಮ್ಮ ಉತ್ತರಗಳನ್ನು ನೋಡಿದರೆ ಮಾಘ ಕವಿಯನ್ನು ಸೋಲಿಸಿದ ಅಜ್ಜಿಯ ನೆನಪಾಗುತ್ತದಲ್ಲಾ ರಾಮ್‌ಜೀ?*
ಆ ಅಜ್ಜಿ ಮಾಘನ ಬುದ್ಧಿಗೆ ಪಾಲ್ಗುಣ ಮುಸುಕಿದಾಗ ದೊರೆತು ಬುದ್ಧಿಗೆ ಚೈತ್ರ ತಂದಳಂತೆ. ನನಗೆ ಪೃಚ್ಛಕರೇ ಚೈತ್ರದಾತರು.

ವಿ. ಹಮೀದ್, ವಿಟ್ಲ
*ಕಿಸ್ ಕೊಟ್ಟದ್ದಾಳೆ. ಮಾತನಾಡಿಸಲೇ?*
ಕೊಂಚ ಕಾಯಿರಿ. ಮಗು 12 ತಿಂಗಳಿಗೆ ಕಿಸ್ ಕೊಡಬಲ್ಲಳು; ಆದರೆ ಮಾತು ಬರುವುದು 18 ತಿಂಗಳಿಗೆ.

ಎನ್.ಆರ್. ತಮ್ಮಯ್ಯಶೆಟ್ಟಿ, ಅರಸೀಕೆರೆ
*ಸರ್, ಭಾರತದಂಥ ಬುದ್ಧಿವಂತ ರಾಷ್ಟ್ರದಲ್ಲಿ 'ರಾಷ್ಟ್ರ ಕವಯಿತ್ರಿ'ಗಳು ಏಕೆ ಉಗಮವಾಗಿಲ್ಲ?*
ಪ್ರತಿ ಶಿಶುವೂ ತಾಯಿಯ ಕವನವೇ; ಪ್ರತಿ ತಾಯಿಯೂ ರಾಷ್ಟ್ರಕವಯಿತ್ರಿಯೇ. ಅರ್ಹರಿದ್ದಾರೆ, ಅಷ್ಟು ಪ್ರಶಸ್ತಿಗಳಿಲ್ಲ.

ಮೋಹನ ಹಣಗಿ, ಅಮೀನಗಡ
*ಆಸೆಯೇ ದುಃಖಕ್ಕೆ ಮೂಲವೆಂಬ ಅರಿವಿದ್ದರೂ ಆಸೆಯಿಲ್ಲದೆ ಬದುಕಿಲ್ಲ. ಏನಿದರ ಗುಟ್ಟು ರಾಮ್‌ಜೀ?*
ಸ್ವಲ್ಪ ಆಸೆ ಇರಲಿ; ಆಸೆ ತಂದ ದುಃಖ-ದುಗುಡದಲ್ಲೂ ಒಳಿತಿದೆ. ದುಗುಡ ಆತ್ಮವ ಕಡೆದು ಸತ್ವವೆತ್ತುವ ಮಂತು.

## ಬಹುಮಾನಿತ ಪ್ರಶ್ನೆ

ಮುಕುಂದ ಹೆರಕಲ್ಲ, ಕಲಬುರ್ಗಿ
*ಮದುವೆಯಾದ ಹೊಸತರಲ್ಲಿ ಕೆಲವರು ಹೆಂಡತಿಯ ತವರುಮನೆಗೆ ಬಹಳ ಸಹಾಯ ಮಾಡುತ್ತಾರೆ. ಏಕೆ?*
ವೆಹಿಕಲ್‌ನ ಫ್ರೀ ಸರ್ವೀಸ್ ಇರುವವರೆಗೆ ಷೋರೂಂ ಸಂಪರ್ಕ ಬೇಕು! ಬಾಣಂತನದ ನಂತರ ಬಣ್ಣ ಬಯಲು!

ಎಸ್.ಜಿ. ಕರನಂದಿ, ಹುನಗುಂದ
*ಸರಕಾರಿ ಆಸ್ಪತ್ರೆಗಳಿಗೂ, ಖಾಸಗಿ ಆಸ್ಪತ್ರೆಗಳಿಗೂ ಏನು ವ್ಯತ್ಯಾಸ?*
ಅಲ್ಲಿ ಸೇರಲು ಇಂಫ್ಲೂಯೆನ್ಸ್ ಮುಖ್ಯ; ಇಲ್ಲಿ ಸೇರಲು ಇನ್ಶೂರೆನ್ಸ್ ಮುಖ್ಯ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಶಿವನು ಕುಡಿದ ಹಾಲಾಹಲಕ್ಕೂ, ಜನರು ಕುಡಿಯುವ ಆಲ್ಕೋಹಾಲಿಗೂ ಏನು ವ್ಯತ್ಯಾಸ?*
ಆಲ್ಕೋಹಾಲ್ ಜಗದ ನಗೆಯನ್ನೇ ಕಸಿಯುತ್ತಿದೆ; ಹಾಲಾಹಲ ಶಿವನ ನಗೆಯನ್ನು ಇನಿತೂ ಕದಲಿಸಲಿಲ್ಲ.

ಆರತಿ ಘಟಿಕಾರ್, ದುಬೈ
*ಸಭೆಗಳಲ್ಲಿ ಕೊರೆಯುವ ಭಾಷಣಕ್ಕೂ, ಕಿವಿಯ ಹತ್ತಿರವೇ ಸತತವಾಗಿ ಗುಂಯ್ ಎನ್ನುವ ಸೊಳ್ಳೆಗೂ ವ್ಯತ್ಯಾಸವೇನು?*



ಒಂದೇ ವ್ಯತ್ಯಾಸ - ಚಪ್ಪಾಳೆ ತಟ್ಟಿದಷ್ಟೂ ಸೊಳ್ಳೆ ದೂರವಾಗುತ್ತದೆ; ಕೊರೆತ ಘೋರವಾಗುತ್ತದೆ.

ಬಾ.ರಂ. ಸುರೇಶ್, ಶಿವಮೊಗ್ಗ
*ಇತ್ತೀಚೆಗೆ ಅನಾಥಾಶ್ರಮಗಳು, ವೃದ್ಧಾಶ್ರಮಗಳು ಹೆಚ್ಚಾಗುತ್ತಿರುವುದಕ್ಕೆ ಕಾರಣವೇನು?*
ಸಂಬಂಧ ಬಂದಾ ಆಗದೆ ಚಿಲ್ಲರೆ ಆಗಿರುವುದು.

ಸೃಜನ ಜೈನ್, ಹೂವಿನಹಡಗಲಿ
*ಉತ್ತರರಾಮ್‌ನ ಅನುಯಾಯಿಗಳಾದ ನಮಗೆ ಸಂಸಾರದಲ್ಲಿ, ದೇಶದಲ್ಲಿ ಮುಂದೆ ಹೋಗಲು ಸಂದೇಶ ನೀಡಿ ಸಾರ್?*
ಸರಿಯಾದ ಜಿಪಿಎಸ್ ಬಳಸಿರಿ; ಜಿ ಗುಡ್‌ನೆಸ್; ಪಿ ಪ್ರೋಗ್ರೆಸ್; ಎಸ್ ಸೆನ್ಸಿಬಿಲಿಟಿ.

■ ರಾಮ್